ಹೆಚ್ಚೆಚ್ಚು ಪ್ರಸಾರಗೊಳ್ಳುತ್ತಿವೆ. ಆದರೆ ಅಂಥವುಗಳು ಓದಿಸುವಿಕೆಯ ರಾಜಕಾರಣದ ಭಾಗವಾಗಿ, ಪ್ರಕಟಣಾ ಜಗತ್ತಿನ ಸೂಕ್ಷ್ಮ ನಿಯಂತ್ರಣ ಮತ್ತು ನಿರ್ಬಂಧಕ್ಕೊಳಪಟ್ಟು ಹೊರಜಗತ್ತಿನ ಕಣ್ಣಿಗೆ ಕಾಣಿಸದೆ ಹೋಗುತ್ತವೆ. ಪರಿಣಾಮವಾಗಿ ಬಹಳಷ್ಟು ಲೇಖಕರು ಪ್ರಕಟಣೆಗೆ ಅಂತರ್ಜಾಲದ ಮೊರೆ ಹೋಗುತ್ತಿದ್ದಾರೆ. ನವ ಮಾಧ್ಯಮಗಳ ಜಂಟಿ ಕಾರ್ಯಾಚರಣೆಯು ಹೊಸ ಬಗೆಯ ಪಠ್ಯಗಳ ಶೋಧನೆಗೂ ಮತ್ತು ಪ್ರಯೋಗ ಶೀಲತೆಗೂ ದಾರಿ ಮಾಡಿಕೊಡುತ್ತಿದೆ. ಅಲ್ಲೂ ಇನ್ನೊಂಥರ ರಾಜಕೀಯ ಆಟ ನಡೆಯುತ್ತದೆ, ಆ ಮಾತು ಬೇರೆ.

**◆ ಭಾರತದಂತೆ ಅಪಾರ ಜನಸಂಖ್ಯೆಯುಳ್ಳ ಚೀನಾದಲ್ಲಿ, ಅತ್ಯಂತ್ಯ ಪುರಾತನ ಸಾಮಾಜಿಕ ಸಂಸ್ಥೆಯಾದ 'ಮದುವೆ'ಯ ಬಂಧನದ ಪ್ರಸ್ತುತತೆಯ ಕುರಿತು ಒಬ್ಬ ಕವಿಯಾಗಿ ನಿಮ್ಮ ಅಭಿಪ್ರಾಯವೇನು?**

ಮನುಷ್ಯನಿಗೆ ಪ್ರೀತಿಯ ಅಗತ್ಯವಿದೆ. ಮದುವೆಗೆ ಇದರ ಅಗತ್ಯವಿಲ್ಲ. ಪ್ರೀತಿ ಒಂದು ಬಗೆಯಲ್ಲಿ ಅನಿರೀಕ್ಷಿತ ಮತ್ತು ನಿಯಂತ್ರಣವನ್ನು ಮೀರಿದ್ದು. ಇದು ಯಾರಿಗಾದರೂ ಯಾವಾಗ ಬೇಕಾದರೂ ಸಂಭವಿಸಬಹುದು. ಮದುವೆಯು ಅನಿವಾರ್ಯದ ಅಗತ್ಯವಲ್ಲ. ಮದುವೆಯ ಅಸ್ತಿತ್ವವು ಪ್ರೀತಿಯನ್ನ ರಕ್ಷಿಸುವುದೋ ಅಥವಾ ಮುಂದುವರೆಸುವುದೋ ಅಲ್ಲ. ಬದಲಾಗಿ ಸಂತಾನಾಸಕ್ತಿ ಮತ್ತು ಆಸ್ತಿಯ ಪಾಲುದಾರಿಕೆ ರಕ್ಷಿಸುವುದು, ಸಾಮಾಜಿಕ ಸ್ಥಿರತೆಯನ್ನ ಕಾಪಾಡಿಕೊಳ್ಳುವುದಕ್ಕಷ್ಟೆ ಅದು ತುಂಬಾ ಪ್ರಯೋಜನಕಾರಿ. Marriage sounds very utilitarian. ಮತ್ತೆ ನಾನು ಇದನ್ನ ದ್ವೇಷಿಸುತ್ತೇನೆ. ಬಹಳ ಸಲ ಮದುವೆ ಎಂಬುದು ಅಪಾಯಗಳನ್ನು ಎದುರಿಸಲು ಸಿದ್ಧರಿರುವ ಇಬ್ಬರ ನಡುವಿನ ಕೃತಕ ಮೈತ್ರಿಯಾಗಿರುತ್ತದೆ. ಒಂದರ್ಥದಲ್ಲಿ ಅದು ಪ್ರೀತಿಯ ಕೊರತೆ ಇರುವ ಸಾಮಾಜಿಕ ಒಪ್ಪಂದ. ಪುರುಷ ಪ್ರಧಾನ ವ್ಯವಸ್ಥೆಯ ನ್ಯಾಯ ಪರಿಕಲ್ಪನೆ ಮತ್ತು Rationalityಯ ತರ್ಕ ಇಲ್ಲಿ ಶೋ ಆಫ್ ಆಗುತ್ತದೆ.

**◆ ಕೇವಲ ಆರ್ಥಿಕ ಅಭಿವೃದ್ಧಿಯ ಮಾನದಂಡಗಳನ್ನು ಮುಂದಿಟ್ಟುಕೊಂಡು ನೋಡುವುದಾದರೆ, ಇವತ್ತಿನ ಚೀನಾ ಹೊರ ಜಗತ್ತಿನ ಕಣ್ಣಿಗೆ ಕಾಣಿಸುತ್ತಿರುವುದೇ ಬೇರೆ ಥರ ಅನ್ನುತ್ತೆ... ಸದ್ಯಕ್ಕೆ ಚೀನಾದ ಯುವಜನತೆಯ ಮುಂದಿರುವ ಸವಾಲುಗಳೇನು?**

ನಮ್ಮ ಅಭಿವೃದ್ಧಿಯ ಮಾನದಂಡಗಳೇನು? ಆರ್ಥಿಕ ಸಮೃದ್ಧಿಯ ಸ್ಥೂಲ ನೋಟವು ವಾಸ್ತವವಾಗಿ ಕೆಲವು ಸಲ ವ್ಯಕ್ತಿಗತ ಸನ್ನಿವೇಶದೊಂದಿಗೆ ಸಕಾರಾತ್ಮಕವಾಗಿ ಹೊಂದಿಕೆಯಾಗುವುದಿಲ್ಲ. Artificial intelligence ಕಾಲದ ಯುವಕ ಯುವತಿಯರಾಗಿ ನಾವು, 'ಸಂತೋಷವೆಲ್ಲಿದೆ' ಎಂದು ಯಾವಾಗಲೂ ಕೇಳುತ್ತಿರುತ್ತೇವೆ. ಆದರೆ ಕಾಲ ಸರಿದಂತೆ ಸಂತೋಷವು ನಮ್ಮಿಂದ ದೂರ ದೂರ ಹೋದಂತೆ ಭಾಸವಾಗುತ್ತದೆ. ದುಬಾರಿಯಾದ ಮನೆ ಬಾಡಿಗೆ, ಕೈಗೆಟುಕದ ಶಿಕ್ಷಣ ಮತ್ತು ಆರೋಗ್ಯ ಶುಲ್ಕಗಳು, ಭರಿಸಲಾಗದ ಮತ್ತಿತರ ಜೀವನ ನಿರ್ವಹಣೆಯ ವೆಚ್ಚಗಳು – ಇಂತಹ ಅಪರಿಮಿತ ಆರ್ಥಿಕ ಸಂಕಷ್ಟಗಳನ್ನು ನಾವೀಗಲೂ ಪ್ರತಿ ದಿನ ಎದುರಿಸುತ್ತಿದ್ದೇವೆ. ಬಹು ಸಂಖ್ಯಾತ ಯುವ ಸಮುದಾಯ ದೀರ್ಘಾವಧಿಯ ದುಡಿಮೆಯಲ್ಲಿ ತೊಡಗಿಸಿಕೊಂಡಿರುತ್ತದೆ. ಹಾಗಿದ್ದೂ ಮಹಾನಗರಗಳಲ್ಲಿ ಅವರಿಗೆ ಒಂದು ಮನೆ ಅಥವಾ ಆರೋಗ್ಯ ವಿಮೆಯನ್ನು ಮಾಡಿಕೊಳ್ಳಲಾಗುವುದಿಲ್ಲ. ಕಡಿಮೆ ವೇತನ, ಕಠಿಣ ದುಡಿಮೆ ಮತ್ತು ವೃತ್ತಿ ಭದ್ರತೆಯ ಪ್ರಶ್ನೆಯನ್ನು ಎದುರಿಸುತ್ತಾರೆ. ಅದೇ ವೇಳೆ ಬೇರೆ ಬೇರೆ ಕೈಗಾರಿಕೆಗಳಲ್ಲಿ ತಾಂತ್ರಿಕ ಆಧುನೀಕರಣವು ಅತೀ ವೇಗವಾಗಿಯೇ ಸಂಭವಿಸುವುದರಿಂದ ಕಲಿಕೆ ಮತ್ತು ಕೌಶಲ್ಯದ ವಿಷಯದಲ್ಲಿ ನಿರಂತರವಾಗಿ ಅಪ್ಡೇಟ್ ಆಗುವುದು ಅನಿವಾರ್ಯವಾಗಿರುತ್ತದೆ. ಆದ್ದರಿಂದ ಜನರು ದೈಹಿಕವಾಗಿಯೂ ಮಾನಸಿಕವಾಗಿಯೂ ಬಳಲುತ್ತಾರೆ. ಮನೋವ್ಯಾಧಿಗಳಿಗೂ ಗುರಿಯಾಗುತ್ತಾರೆ. ಜೊತೆಗೆ ಅವರು ಉದ್ಯೋಗ ಬದಲಾವಣೆ,ಸಂಬಂಧಗಳ ನಿರ್ವಹಣೆ, ನಿತ್ಯ ಜೀವನದಲ್ಲಿ ಆತಂಕ ಮತ್ತು ಅನಿಶ್ಚಿತತೆಯ ವಿವಿಧ ಆಯಾಮಗಳನ್ನು ಎದುರಿಸುವುದು ಸಾಮಾನ್ಯವಾಗಿರುತ್ತದೆ. ಇಂದಿನ ಕೃತಕ ಒಪ್ಪಿತ ಪರಿಸರ, ಮೆಗಾ ಮಾಹಿತಿ ಮತ್ತು ಸಾಮಾಜಿಕ ಶೈಲಿಗಳು ಗತ ಕಾಲಕ್ಕಿಂತ